# **ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.**

**ಸಿ.ಸಿ. ನಂ. 348/2022.**

**ಸಿ ಡಬ್ಲ್ಯೂಃ 1**

**ಪಿ ಡಬ್ಲ್ಯೂಃ 1**

| | | |
|---|---|---|
| ಹೆಸರು | : | ಜೀವರಾಜ |
| ತಂದೆಯ ಹೆಸರು | : | ಹೇಮನಗೌಡ ಪಾಟೀಲ |
| ವಯಸ್ಸು | : | 27 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಬಡಮಲ್ಲಿ |

**ದಿನಾಂಕಃ 14-06-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ಆರೋಪಿತರು ನಮ್ಮ ಗ್ರಾಮದವರು. ಸದರಿಯವರು ನನಗೆ ಪರಿಚಯಸ್ಥರು. ಚಾಸಾ-6 ಮತ್ತು 7 ರವರು ನನ್ನ ಚಿಕ್ಕಪ್ಪಂದಿರು. ಚಾಸಾ-8 ರಿಂದ 12 ನನಗೆ ಪರಿಚಯಸ್ಥರು. ಬಡಮಲ್ಲಿ ಗ್ರಾಮದಲ್ಲಿ ನನ್ನ ತಂದೆ ತಾಯಿಯೊಂದಿಗೆ ನಾನು ವ್ಯವಸಾಯ ಮಾಡಿಕೊಂಡು ಜೀವನ ನಡೆಸಿಕೊಂಡು ಬಂದಿರುತ್ತೇವೆ. ನನ್ನ ತಂದೆಯನ್ನು ಗೌರಮ್ಮ ಎಂಬುವವರು 18.04.1984 ರಂದು ದತ್ತು ಪಡೆದಿದ್ದರು. ಅಂದಿನಿಂದ ಬಡಮಲ್ಲಿ ಗ್ರಾಮದ ಸರ್ವೆ ನಂ. 40/2, 07 ಎಕರೆ 31 ಗುಂಟೆ ಮತ್ತು 40/4 01 ಎಕರೆ 34 ಗುಂಟೆ ಜಮೀನುಗಳನ್ನು ನಾವೇ ಸಾಗುವಳಿ ಮಾಡಿಕೊಂಡು ಬಂದಿರುತ್ತೇವೆ. ಹೀಗಿರುವಾಗ ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ 1 ನೇ ಆರೋಪಿ, 4 ನೇ ಆರೋಪಿ ಹಾಗೂ ಅವರ ಮಕ್ಕಳು ತಂಟೆ ಮಾಡುತ್ತಾ ಬಂದಿರುತ್ತಾರೆ.

2. ಹೀಗಿರುವಾಗ ದಿನಾಂಕಃ 26.08.2021 ರಂದು ಬೆಳಿಗ್ಗೆ 11.00 ರ ಸಮಯದಲ್ಲಿ ನಾನು ಹಾಗೂ ನನ್ನ ತಂದೆ ಸರ್ವೆ ನಂ. 40/4 ಜಮೀನಲ್ಲಿ ರಂಟೆ ಹೊಡೆಯುತ್ತಿದ್ದಾರೆ ಆರೋಪಿ 1 ರಿಂದ 8 ರವರು ಗುಂಪು ಕಟ್ಟಿಕೊಂಡು ಬಂದು ಸದರಿ ಜಮೀನನ್ನು ಉಳಬೇಡಿ ಎಂದು ಅವಾಚ್ಯ ಶಬ್ದಗಳಿಂದ ಬೈದು ಎಲ್ಲರೂ ಕೂಡಿ ನನ್ನ ತಂದೆಯನ್ನು ಹೊಡೆಯಲು ಪ್ರಾರಂಭಿಸಿದರು. ನಾನು ಬಿಡಿಸಲು ಹೋದಾಗ ನನಗೂ ಸಹ ಕಾಲಿನಿಂದ ಒದ್ದಿರುತ್ತಾರೆ. ಸದರಿ ಸಮಯದಲ್ಲಿ ಗಲಾಟೆಯನ್ನು ಬಿಡಿಸಲು ಬಂದ ನನ್ನ ಚಿಕ್ಕಪ್ಪ ಚಾಸಾ-6 ರವರಿಗೆ 3 ನೇ ಆರೋಪಿ ಕೈಯಿಂದ ಹೊಡೆದನು. ಹಾಗೂ ಚಾಸಾ-7 ರವರಿಗೆ 3 ನೇ ಆರೋಪಿ ಕುತ್ತಿಗೆ ಹಿಡಿದು ಹೊಡೆದನು. 6 ನೇ ಆರೋಪಿ ಚಪ್ಪಲಿಯಿಂದ ನನ್ನ ತಂದೆಗೆ ಹೊಡೆದನು ಹಾಗೂ ಕೈಯಿಂದ ಮೈಕೈ ಗೆ ಹೊಡೆದನು ಹಾಗೂ ಸದರಿ ಸಮಯದಲ್ಲಿ ಬಂದ ಚಾಸಾ-8 ಮತ್ತು 9 ರವರು ಜಗಳ ಬಿಡಿಸಿದರು. ಸದರಿ ಗಲಾಟೆಗೆ 9 ರಿಂದ 11 ನೇ ಆರೋಪಿತರು 1 ರಿಂದ 8 ನೇ ಆರೋಪಿತರಿಗೆ ಪ್ರಚೋಧನೆ ನೀಡಿದ್ದರಿಂದ ಆಗಿರುತ್ತದೆ.

3. ಸದರಿ ಘಟನಾ ಸ್ಥಳದಿಂದ ನಾನು ಹಾಗೂ ನನ್ನ ತಂದೆ ಹಾವೇರಿಯ ಜಿಲ್ಲಾ ಆಸ್ಪತ್ಗೆ ಚಿಕಿತ್ಸೆ ಪಡೆಯಲು ಹೋದೆವು. ಸದರಿ ಆಸ್ಪತ್ರೆಯಲ್ಲಿ ವೈದ್ಯರು ನನ್ನ ತಂದೆಗೆ ಚಿಕಿತ್ಸೆ ನೀಡಿ ಕಳುಹಿಸಿದರು. ಇದಾದ ನಂತರ ದಿನಾಂಕಃ 29.08.2021 ರಂದು ಬೆಳಿಗ್ಗೆ 06.30 ರ ಸಮಯದಲ್ಲಿ ನನ್ನ ತಂದೆ ಸದರಿ ಸರ್ವೆ ನಂ. 40/4 ಜಮೀನಿಗೆ ಹೋಗಿದ್ದಾಗ ನನಗೆ ಕರೆ ಮಾಡಿ ಅವರಿಗೆ ಆರೋಗ್ಯ ಸರಿಯಿಲ್ಲ ಬಾ ಎಂದು ಹೇಳಿದರು. ತಕ್ಷಣ ನಾನು ಜಮೀನಿಗೆ ಹೋಗಿ ನೋಡಲಾಗಿ ಅಲ್ಲಿ ನನ್ನ ತಂದೆ ಮೇಲೆ ಮುಖವಾಗಿ ಬಿದ್ದಿದ್ದರು. ಅದಕ್ಕೆ ನಾನು ನನ್ನ ತಂದೆಯನ್ನು ವಿಚಾರಿಸಲಾಗಿ ನನ್ನ ತಂದೆ ಅವರಿಗೆ 1 ರಿಂದ 8 ನೇ ಆರೋಪಿತರು ಕೂಡಿಕೊಂಡು ಹೊಡೆದಿದ್ದಾಗಿ ತಿಳಿಸಿದರು. ಹಾಗೂ ತನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗು ಎಂದು ತಿಳಿಸಿದರು. ನಾನು ತಕ್ಷಣ ನನ್ನ ಅಣ್ಣನಾದ ಚಾಸಾ-10 ರವರಿಗೆ ಕರೆ ಮಾಡಿ ಆತ ಬೈಕ್ ತೆಗೆದುಕೊಂಡು ಬಂದಿದ್ದು ಬೈಕ್ ಮೇಲೆ ನಾನು ಹಾಗೂ ನನ್ನ ಅಣ್ಣ, ತಂದೆಯನ್ನು ಊರಿನವರೆಗೆ

ಕರೆದುಕೊಂಡು ಹೋಗಿ ಅಲ್ಲಿಂದ ಚಾಸಾ-11 ರವರ ಓಮಿನಿ ಕಾರಿನಲ್ಲಿ ಹಾವೇರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಸದರಿ ಆಸ್ಪತ್ರೆಗೆ ಬೆಳಿಗ್ಗೆ 09.15 ರ ಸಮಯದಲ್ಲಿ ಹೋಗಿದ್ದೆವು. ಸದರಿ ಆಸ್ಪತ್ರೆಯಲ್ಲಿ ವೈದ್ಯರು ನನ್ನ ತಂದೆಯನ್ನು ಪರೀಕ್ಷಿಸಿ ಅವರು ಮೃತಪಟ್ಟಿರುತ್ತಾರೆ ಎಂದು ತಿಳಿಸಿದರು. ತಕ್ಷಣ ನಾನು ಅದೇದಿನ ಆರೋಪಿತರ ವಿರುದ್ಧ ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ದೂರು ದಾಖಲಿಸಿದ್ದೆ. ಸದರಿ ದೂರನ್ನು ಚಾಸಾ-12 ರವರು ಬರೆದಿದ್ದರು. ಸಾಕ್ಷಿ ದೂರನ್ನು ನೋಡುತ್ತಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು 1 ಎ ಎಂದು ಗುರುತಿಸಲಾಯಿತು.

4. ಸದರಿ ಘಟನೆ ಸಂಬಂಧಿಸಿದಂತೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ದಿನಾಂಕಃ 29.08.2021 ರಂದು ನನ್ನ ತಂದೆಯ ಶವದ ಶವಪಂಚನಾಮೆಯನ್ನು ಹಾವೇರಿ ಜಿಲ್ಲಾ ಆಸ್ಪತ್ರೆಯ ಶವಗಾರದಲ್ಲಿ ಮಾಡಿರುತ್ತಾರೆ. ಸದರಿ ಸಮಯದಲ್ಲಿ ನಾನು ಚಾಸಾ-2 ಮತ್ತು 3 ಹಾಗೂ 23 ರವರು ಇದ್ದೆವು. ಸದರಿ ಸಮಯದಲ್ಲಿ ಪೋಲಿಸರು ಪಂಚನಾಮೆ ಮಾಡಿ ಪೋಟೊ ತೆಗೆದಿರುತ್ತಾರೆ. ಪಂಚಾನಮೆಯನ್ನು ಮದ್ಯಾಹ್ನ 01.45 ರಿಂದ 02.45 ರವರೆಗೆ ಜರುಗಿಸಿರುತ್ತಾರೆ. ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು 2 ಎ ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-3 ರಿಂದ 9 ಎಂದು ಗುರುತಿಸಲಾಯಿತು.

5. ದಿನಾಂಕಃ 29.08.2021 ರಂದು ನಾನು ತೋರಿಸಿದ ಘಟನಾ ಸ್ಥಳದಲ್ಲಿ ಪೋಲಿಸರು ನನ್ನ ಹಾಗೂ ಚಾಸಾ-4, 5 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಘಟನಾ ಸ್ಥಳ ಬಡಮಲ್ಲಿ ಗ್ರಾಮದ ಸರ್ವೆ ನಂ. 40/4 ಜಮೀನ ಆಗಿರುತ್ತದೆ. ಸದರಿ ಸ್ಥಳದಲ್ಲಿ ಪೋಲಿಸರು ಪಂಚನಾಮೆ ಜರುಗಿಸಿ ಹಾತನಕಾಶೆ ತೆಗೆದು ಪೋಟೊ ತೆಗೆದಿರುತ್ತಾರೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು 10 ಎ ಎಂದು ಗುರುತಿಸಲಾಯಿತು. ಕಚ್ಚಾ ನಕ್ಷೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು 11 ಎ ಎಂದು ಗುರುತಿಸಲಾಯಿತು.

ಹಾಗೂ 6 ಫೋಟೋಗಳನ್ನು ನಿಪಿ-12 ರಿಂದ 17 ಎಂದು ಗುರುತಿಸಲಾಯಿತು. ಹಾಗೂ ಸದರಿ ಸ್ಥಳದಿಂದ 2 ವಾಕ್ ಮೇಟ್ ಕಂಪನಿಯ ಚಪ್ಪಲಿಗಳನ್ನು ಪೋಲಿಸರು ಅಮಾನತು ಪಡಿಸಿಕೊಂಡರು. ಸದರಿ ಚಪ್ಪಲಿಗಳ 2 ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-18 ಮತ್ತು 19 ಎಂದು ಗುರುತಿಸಲಾಯಿತು. ಸದರಿ ದಿನ ಪಂಚನಾಮೆಯನ್ನು ಸಂಜೆ 04.00 ರಿಂದ 05.00 ವರೆಗೆ ಜರುಗಿಸಿರುತ್ತಾರೆ. ಸದರಿ 2 ಚಪ್ಪಲಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಎಂ.ಓ 1 ಮತ್ತು 2 ಎಂದು ಗುರುತಿಸಲಾಯಿತು. ಸದರಿ ದಿನ ನನ್ನ ತಂದೆಗೆ ಹಾಗೂ ನಮಗೆ ಹಲ್ಲೆ ಮಾಡಿದ ಆರೋಪಿತರು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರೇ ಆಗಿರುತ್ತಾರೆ. ಸಾಕ್ಷಿ ಅವರನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸ.ಸ.ಅ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಅವರಿಗೆ ಪಾಟೀ ಸವಾಲು ಮಾಡಲು ಅನುಮತಿಸಬೇಕೆಂದು ಕೇಳಿಕೊಂಡ ಮೇರೆಗೆ ಅನುಮತಿಸಲಾಗಿದೆ)**

**ಪಾಟೀ ಸವಾಲುಃ ಎಪಿಪಿ ರವರಿಂದಃ**

ನನ್ನ ತಂದೆ ಹೃದಯಾಘಾತದಿಂದ ತೀರಿಕೊಂಡಿರುತ್ತಾರೆ ಎಂದು ನಾನು ಪೋಲಿಸರಿಗೆ ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

ಪಾಟೀ ಸವಾಲಿಗೆ ಆರೋಪಿತರ ಪರ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

ಸಿ.ಸಿ. ನಂ. **348/2022** ಪಿ. ಡಬ್ಲ್ಯೂ 1

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಬ್ಯಾಡಗಿ.